# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಉಪಲೋಕ್/ಬಿಜಿಎಂ-1965/2020/ಎಆರ್ಇ-6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ:12/08/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ. ಶ್ರೀಶೈಲ, ತಂದೆ ಸಂಗಪ್ಪ ಸವದಿ, ಕಾರ್ಯನಿರ್ವಾಹಕ ಅಧಿಕಾರಿ, ಕಣಕಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನರಗುಂದ ತಾಲ್ಲೂಕು, ಗದಗ ಜಿಲ್ಲೆ ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ. ಬಿ.ಎನ್. ಬೆಡಸೂರು, ವಕೀಲರು, ರಾಮಪುರ ಬಡಾವಣೆ, ಸವದತ್ತಿ, ಬೆಳಗಾವಿರವರು ಶ್ರೀ. ಶ್ರೀಶೈಲ, ತಂದೆ ಸಂಗಪ್ಪ ಸವದಿ, ಕಾರ್ಯನಿರ್ವಾಹಕ ಅಧಿಕಾರಿ, ಕಣಕಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನರಗುಂದ ತಾಲ್ಲೂಕು, ಗದಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ, ಕಣಕಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯಾನಿರ್ವಾಹಕ ಅಧಿಕಾರಿಯಾದ ಎದುರುದಾರರ ವಿರುದ್ಧ ನರಗುಂದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಿಸಿ. ಸಂಖ್ಯೆ: 526/2019 (ಐ.ಪಿ.ಸಿ ಕಲಂ.171ಡಿ, 417, 420, 468 ಮತ್ತು 471 ಸಹ ವಾಚಕ ಕಲಂ. 34) ರಂತೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಪೋಲೀಸರು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಒಂದು ವರ್ಷವಾಗಿದ್ದರೂ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿಲ್ಲವಾದ್ದರಿಂದ ಗದಗ ಜಿಲ್ಲಾಧಿಕಾರಿಗಳು, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಸಹಕಾರ ಸಂಘಗಳ ಉಪ ನಿಬಂಧಕರು ಮತ್ತು ಸಹಾಯಕ ನಿಬಂಧಕರು, ಗದಗರವರಿಗೆ ದಿ. 31/08/2022ರಂದು ಅರ್ಜಿಯನ್ನು ಸಲ್ಲಿಸಿದ್ದು, ಈವರೆಗೂ ಯಾವುದೇ ಸೂಕ್ತ ಕ್ರಮ ಜರುಗಿಸಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ದೂರುದಾರರು ವಿನಂತಿಸಿದ್ದಾರೆ.

3. ದೂರಿನ ಜೊತೆಗೆ ಅಪರಾಧ ಸಂಖ್ಯೆ: 39/2019ರ ಪ್ರಥಮ ವರ್ತಮಾನ ವರದಿ, ದೂರು ಮತ್ತು ದೋಷಾರೋಪಣ ಪಟ್ಟಿಯ ಪ್ರತಿಯನ್ನು ಸಲ್ಲಿಸಿದ್ದಾರೆ.

4. ದಿ. 24/02/2019ರಂದು ನಡೆದ ಕಣಕಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಸಮಯದಲ್ಲಿ ಶ್ರೀ. ರವಿ ಬಿನ್ ಧರ್ಮಾರೆಡ್ಡಿ ಹುಲಿಗೇರಿ ಎಂಬುವವರು ಶ್ರೀ. ಶಂಕರಗೌಡ ಬಿನ್ ಲಕ್ಷ್ಮಣಗೌಡ ಬೇಡಗೌಡ್ರ ರವರ ಹೆಸರಿನಲ್ಲಿದ್ದ ಖೊಟ್ಟಿ ಗುರುತಿನ ಚೀಟಿಗಳನ್ನು ಬಳಸಿ ಮತದಾನ ಮಾಡಿದ್ದು, ಸದರಿ ಖೊಟ್ಟಿ ಗುರುತಿನ ಚೀಟಿಯನ್ನು ಎದುರುದಾರರು ಸೃಷ್ಟಿಸಿದ್ದಾರೆಂದು ಆಪಾದಿಸಿ ಶ್ರೀ. ಗುರಪ್ಪ ಬಿನ್ ಸಿದ್ಲಿಂಗಪ್ಪ ಸುಗ್ಗಾನಟ್ಟಿ ಎಂಬುವವರು ದಿ. 25/02/2019ರಂದು ನರಗುಂದ ಪೋಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ಪೋಲೀಸರು ಅಪರಾಧ ಸಂಖ್ಯೆ: 39/2019ರಂತೆ ಪ್ರಕರಣವನ್ನು ದಾಖಲಿಸಿ, ತನಿಖೆ ನಡೆಸಿ ಐಪಿಸಿ ಕಲಂ. 171ಡಿ, 417, 420, 468 ಮತ್ತು 471 ಸಹ ವಾಚಕ ಕಲಂ. 34ರಡಿ ದಂಡಿಸಲ್ಪಡುವ ಅಪರಾಧಗಳಿಗಾಗಿ ಎದುರುದಾರರು ಮತ್ತು ಮೇಲೆ ಹೇಳಿದ ಶ್ರೀ.ರವಿ ಬಿನ್ ಧರ್ಮಾರೆಡ್ಡಿ ಹುಲಿಗೇರಿರವರುಗಳ ವಿರುದ್ಧ ನರಗುಂದ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದಿ. 28/06/2019ರ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ. ಎದುರುದಾರರ ವಿರುದ್ಧದ ಸದರಿ ಆಪಾದನೆಗೆ ಸಂಬಂಧಿಸಿದಂತೆ ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸಿಲ್ಲ ಎನ್ನುವುದು ದೂರಿನ ಆಪಾದನೆಯಾಗಿದೆ.

5. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿ, ಸುಳ್ಳು ದೂರಿನ ಆಧಾರದ ಮೇಲೆ ಸಿ.ಸಿ.526/2019ರಲ್ಲಿ ಆತನ ವಿರುದ್ಧ ಸುಳ್ಳು ಕೇಸನ್ನು ಹಾಕಿದ್ದಾರೆ. ನ್ಯಾಯಾಲಯದಲ್ಲಿ ಆಪಾದನೆಗೆ ಸಾಬೀತಾಗಬೇಕಾಗಿದೆ. ಆಪಾದನೆಗಳು ಸಾಬೀತಾಗುವುದಕ್ಕಿಂತ ಮೊದಲು ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲ. ಸಂಘದ ಆಡಳಿತ ಮಂಡಳಿ ಇಲಾಖಾ ವಿಚಾರಣೆ ನಡೆಸಲು ಸಕ್ಷಮ ಪ್ರಾಧಿಕಾರವಾಗಿದೆ. ಸಂಘವು ದಿ. 24/09/2020ರಂದು ನಡವಳಿಕೆಗಳನ್ನು ಮಾಡಿ ಕ್ರಿಮಿನಲ್ ಕೇಸ್‌ನಲ್ಲಿ ಆಪಾದನೆಗಳು ಸಾಬೀತಾದ ನಂತರ ಇಲಾಖಾ ವಿಚಾರಣೆಯನ್ನು ಮಾಡಬೇಕಾಗಿರುತ್ತದೆ. ಇದೇ ರೀತಿಯ ಒಂದು ದೂರಿನಲ್ಲಿ ಇಲಾಖಾ ವಿಚಾರಣೆಯು ನಡೆದು ಆರೋಪ ಸಾಬೀತಾಗಿರುವುದಿಲ್ಲ ಎಂದು ವರದಿ ಮಾಡಲಾಗಿದೆ. ದೂರುದಾರರು ತನ್ನ ಸ್ವಂತ ಸಹೋದರಿಯ ಗಂಡನಾಗಿದ್ದಾನೆ. ಓ.ಎಸ್.ನಂ. 96/2012ರಲ್ಲಿ ಪಾಲು ಕೊಡಬೇಕೆಂದು ತೀರ್ಪು ಮತ್ತು ಡಿಕ್ರಿಯಾಗಿದೆ. ದೂರುದಾರರು ಅದರ ವಿರುದ್ಧ ಉಚ್ಚನ್ಯಾಯಾಲಯದಲ್ಲಿ

ಅಪೀಲು ಹಾಕಿದ್ದಾರೆ ಹಾಗೂ ಅದು ವಿಚಾರಣೆಗೆ ಬಾಕಿ ಇದೆ. ಈ ಹಿನ್ನಲೆಯಲ್ಲಿ ತನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

6. ದಿ. 18/11/2020ರ ಪತ್ರದಲ್ಲಿ ಸಹಾಯಕ ನಿಬಂಧಕರು, ಸಹಕಾರ ಸಂಘಗಳು, ಗದಗ ಉಪವಿಭಾಗದವರು, ಸಂಘದ ಆಡಳಿತ ಮಂಡಳಿ ದಿ. 24/09/2020ರಂದು ನಡವಳಿಗಳನ್ನು ಮಾಡಿ ಕ್ರಿಮಿನಲ್ ಕೇಸಿನಲ್ಲಿ ಆರೋಪ ಸಾಬೀತಾದ ನಂತರವೇ ಇಲಾಖಾ ವಿಚಾರಣೆ ಮಾಡಬಹುದೆಂದು ನಿರ್ಣಯಿಸಿದ್ದಾರೆ ಎಂದು ವರದಿ ಮಾಡಿದ್ದಾರೆ.

7. ಸಿ.ಸಿ. 526/2019ರ ಅಂತಿಮ ವರದಿಯ ಪ್ರಕಾರ ನರಗುಂದ ಪೋಲೀಸ್ ಠಾಣಾ ವ್ಯಾಪ್ತಿ ಕಣಿಕೆಕೊಪ್ಪ ಗ್ರಾಮ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ದಿ. 24/02/2019ರಂದು 2-30 ಗಂಟೆ ಸುಮಾರಿಗೆ ಎದುರುದಾರರು ಹಾಗೂ ಇನ್ನೊಬ್ಬ ತಮಗೆ ಬೇಕಾದ ಸದಸ್ಯರಿಗೆ ಮತದಾನ ಮಾಡಿಸುವ ಉದ್ದೇಶದಿಂದ ಎದುರುದಾರರು 2ನೇ ಆರೋಪಿಯನ್ನು, ಶಂಕರಗೌಡ ತಂದೆ ಲಕ್ಷ್ಮಣಗೌಡ ಬೇಡಗೌಡ್ರ, ಕಣಿಕೆಕೊಪ್ಪ ವಾಸಿ ಎಂದು ಬಿಂಬಿಸಿ, ಸದರಿ ಶಂಕರಗೌಡರವರ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರ ಗುರುತಿನ ಕಾರ್ಡಿಗೆ ಒಂದು ಭಾಗದಲ್ಲಿ ಆರೋಪಿ-2 ರವಿ ತಂದೆ ಧರ್ಮರೆಡ್ಡಿ ಇವರ ಫೋಟೋ ಹಚ್ಚಿ ಇನ್ನೊಂದು ಭಾಗದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಸೀಲ್ ಹಾಕಿ ಅದಕ್ಕೆ ಫೋಟೋದ ಮೇಲೆ ಅರ್ಧ ರೌಂಡ್ ಸೀಲ್ ಬರುವ ಹಾಗೆ ಹಾಕಿ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಫಿರ್ಯಾದಿ ಮತ್ತು ಶಂಕರಗೌಡರಿಗೆ ಮೋಸ ವಂಚನೆ ಮಾಡುವ ಉದ್ದೇಶದಿಂದ 2ನೇ ಆರೋಪಿ ರವಿ ಇನ್ನೊಬ್ಬರಂತೆ ನಟಿಸಿ ತನ್ನ ಮತದಾನ ಇರದೇ ಇದ್ದರೂ ಕೂಡ ಮತದಾನ ಮಾಡಿದ್ದಾರೆ. ಇದಕ್ಕೆ ಎದುರುದಾರರು ಕುಮ್ಮಕ್ಕು ನೀಡಿದ್ದಾರೆ.

8. ಆದುದರಿಂದ, ಎದುರುದಾರರು ದುರ್ನಡತೆ, ದುರ್ವತನೆ, ಕರ್ತವ್ಯಚ್ಯುತಿ ಮತ್ತು ಅಧಿಕಾರಕ್ಕೆ ತರವಲ್ಲದ ಆರೋಪ ಎಸಗಿದ್ದಾರೆ. ಮೇಲೆ ಚರ್ಚಿಸಿದ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಎದುರುದಾರರಾದ ಶ್ರೀಶೈಲ ತಂದೆ ಸಂಘಪ್ಪ ಸೌಧಿ, ಕಾರ್ಯಪಾಲಕ ಅಧಿಕಾರಿಗಳು, ಕಣಕಿಕೊಪ್ಪ, ಕೃಷಿ ಪತ್ತಿನ ಸಹಕಾರ ಸಂಘ, ನರಗುಂದ ತಾಲ್ಲೂಕು, ಗದಗ ಜಿಲ್ಲೆ ಇವರ ವಿರುದ್ದ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ. 64ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ.

9. ಸಿವಿಲ್ ಅಪೀಲ್ ನಂ. 1763-1764/2022 ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬ ವಿರುದ್ಧ ಉಮೇಶ, ಈ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಕ್ರಿಮಿನಲ್ ವಿಚಾರಣೆಯಲ್ಲಿ ಎದುರುದಾರರು ಬಿಡುಗಡೆ ಹೊಂದಿದ್ದರೂ ಸಹ ಶಿಸ್ತು ಪ್ರಾಧಿಕಾರ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಬಹುದು ಎಂದು ಹೇಳಿದೆ. ಆದ್ದರಿಂದ ಸಂಘದವರು ಮಾಡಿರುವ ನಡವಳಿಗಳು ಇಲಾಖಾ ವಿಚಾರಣೆಗೆ ಅಡ್ಡಿಯಾಗುವುದಿಲ್ಲ.

10. ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

11. ಆದ್ದರಿಂದ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ. 64ರ ಅಡಿಯಲ್ಲಿ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ ಶ್ರೀ. ಶ್ರೀಶೈಲ, ತಂದೆ ಸಂಗಪ್ಪ ಸವದಿ, ಕಾರ್ಯನಿರ್ವಾಹಕ ಅಧಿಕಾರಿ, ಕಣಕಿಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನರಗುಂದ ತಾಲ್ಲೂಕು, ಗದಗ ಜಿಲ್ಲೆ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಮೂರು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/8

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.